ಓ.ಎಸ್. ನಂ.156/2013

ಡಿಡಬ್ಲ್ಯೂ.2

ದಿಃ 31/10/2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಪ್ರತಿವಾದಿ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಮಾಹಿತಿ ನೀಡಿ ಸಹಿ ಹಾಕಿರುತ್ತೇನೆ.

ಪಾಟೀ ಸವಾಲು ವಾದಿ ಪರ ವಕೀಲರಿಂದಃ

ವೈ ಎನ್ ಚಂದ್ರಶೇಖರಪ್ಪ ಈ ಕೇಸ್ ನ ಪ್ರತಿವಾದಿ ಎಂದರೆ ಸರಿ . ಈ ಕೇಸ್ ನಲ್ಲಿ ನನ್ನ ತಂದೆಯವರು ಎನು ತಕರಾರು ಹಾಕಿದ್ದಾರೆ ಎಂದು ಗೊತ್ತಿದೆ. ವಾದಿಗೆ ನನಗೆ ಸಂಬಂಧ ಇರುವುದಿಲ್ಲ. ವಾದಿ ಹಾಜರುಪಡಿಸಿರುವ ವಂಶವೃಕ್ಷ ದ ಬಗ್ಗೆ ನಮ್ಮ ವಕೀಲರಿಗೆ ಕೇಳಿ ತಿಳಿದುಕೊಂಡಿದ್ದೇನೆ. ವಾದಿಯು ಹಾಜರುಪಡಿಸಿರುವ ವಂಶವೃಕ್ಷ ಸರಿ ಇದೆ. ನಂದ್ಯಪ್ಪ ಮತ್ತು ಚನ್ನಬಸಪ್ಪ ಯಾವಾಗ ಬೇರೆಯಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಎ ಷಡ್ಯೂಲ್ ಆಸ್ತಿ ನಂದ್ಯಪ್ಪ ಮತ್ತು ಚನ್ನಬಸಪ್ಪರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ನಂದ್ಯಪ್ಪ ಮತ್ತು ಚನ್ನಬಸಪ್ಪರವರು ತಮ್ಮ ಜೀವಿತ ಕಾಲದಲ್ಲಿ ಎ ಷುಡ್ಯೂಲ್ ಆಸ್ತಿಯನ್ನು ಹಂಚಿಕೊಂಡಿರುತ್ತಾರೆ. ಸದರಿ ಹಂಚಿಕೆಯ ಪ್ರಕಾರ ಉತ್ತರ ದಿಕ್ಕಿನ ಆಸ್ತಿ ನನ್ನ ಅಜ್ಜನಿಗೆ ಬಂದಿರುತ್ತದೆ ,ದಕ್ಷಿಣ ದಿಕ್ಕಿಗೆ ನಂದ್ಯಪ್ಪನವರಿಗೆ ಬಂದಿರುತ್ತದೆ. ಬಿ ಷಡ್ಯೂಲ್ ಆಸ್ತಿಯ(ಉತ್ತರ ದಿಕ್ಕಿಗೆ ಬಂದಂತಹ ನನ್ನ ಅಜ್ಜನ ಆಸ್ತಿ) ಪೂರ್ವಕ್ಕೆಃ ಗುತ್ಯಪ್ಪ ಮತ್ತು ನಾಗಪ್ಪನವರ ಮನೆಗಳು ಇವೆ ಎಂದರೆ ಸರಿ. ಪಶ್ಚಿಮಕ್ಕೆ ನಮ್ಮ ಅಜ್ಜನ ಹಿಸ್ಸೆಗೆ ಬಂದ ವಾಸದ ಮನೆ , ಉತ್ತರಕ್ಕೆ ಃ ಕೆರೆ ರಸ್ತೆ , ದಕ್ಷಿಣಕ್ಕೆಃ ಬಸಮ್ಮನ ಹಿಸ್ಸೆಯ ಕಣ ಎಂದರೆ ಸರಿ. ಮೇಲೆ ಹೇಳಿದ ಚೆಕ್ ಬಂಧಿ ಸರಿ ಇರುತ್ತದೆ.

ನಿಪಿ.7 ರ ಫೊಟೋದಲ್ಲಿ ಉದ್ದಕ್ಕೆ ಕಾಣುತ್ತಿರುವ ರಸ್ತೆ , ಕೆರೆ ರಸ್ತೆ ಎಂದರೆ ಸರಿ . ಸದರಿ ಕೆರೆ ರಸ್ತೆಯಿಂದ ನಮ್ಮ ಮತ್ತು ವಾದಿಯ ಕಣಕ್ಕೆ ಹೋಗುವ ದಾರಿ ಸದರಿ ನಿಪಿ.7 ಫೊಟೊದಲ್ಲಿ ಕಾಣುತ್ತಿರು ಒಳದಾರಿ ಎಂದರೆ ಸರಿ. ನಿಪಿ.8 ರಲ್ಲಿ ಕಾಣುತ್ತಿರುವ ಹುಲ್ಲಿನ ಬಣವೆ ಮತ್ತು ಟ್ರ್ಯಾಕ್ಟರ್ ಮತ್ತು ಟ್ರ್ಯಾಲರ್ ವಾದಿಗೆ

ಸಂಬಂಧಪಟ್ಟಿದು ಎಂದರೆ ಸರಿಯಲ್ಲ , ಅದು ನಮಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ನಿಪಿ.10 ರ ರಲ್ಲಿ ಕಾಣುತ್ತಿರುವ ಹುಲ್ಲಿನ ಬಣವೆ ಮತ್ತು ಟ್ರ್ಯಾಕ್ಟರ್ ಮತ್ತು ಟ್ಯಾಲರ್ ವಾದಿಗೆ ಸಂಬಂಧಪಟ್ಟಿದು ಎಂದರೆ ಸರಿಯಲ್ಲ, ಅದುನಮಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ನಿಪಿ.11 ರ ಪೊಟೋದಲ್ಲಿ ಕಾಣುತ್ತಿರುವ ದಾರಿಗೆ ಅಡ್ಡವಾಗಿ ನಿಂತಿರುವ ಟ್ರ್ಯಾಲರ್ ನಿಂತಿರುವಂತಹ ಜಾಗ ಬಸಮ್ಮನ ಕಣಕ್ಕೆ ಹೋಗುವಂತಹ ರಸ್ತೆ ಎಂದರೆ ಸರಿಯಲ್ಲ. ದಿಃ18.07.2013 ರಂದು ನಾನು ನನ್ನ ತಂದೆ ಸೇರಿಕೊಂಡು ದಾರಿಯನ್ನು ಬಂದ್ ಮಾಡಬೇಕು ಎಂದು ಸದರಿ ಟ್ರ್ಯಾಕ್ಟರ್ ನ್ನು ಅಡ್ಡವಾಗಿ ನಿಲ್ಲಿಸಿದ್ದೇವೆ ಎಂದರೆ ಸರಿಯಲ್ಲ , ಸಾಕ್ಷಿ ಮುಂದುವರೆದು ನಾವು ಯಾವಾಗಲೂ ಅಲ್ಲಿಯೇ ನಿಲ್ಲಿಸುತ್ತೇವೆ ಎಂದು ನುಡಿಯುತ್ತಾರೆ. ನಿಪಿ.25 ರಲ್ಲಿ ಕಾಣುತ್ತಿರುವ ಹುಲ್ಲಿನ ಬಣವೆ ಮತ್ತು ಖಾಲಿ ಜಾಗ ಹಾಗೂ ಕಲ್ಟಿವೇಟರ್ಸ ವಾದಿಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ, ಅದು ನಮಗೆ ಸಂಬಂಧಪಟ್ಟಿದ್ದು ಎಂದು ಸಾಕ್ಷಿ ನುಡಿಯುತ್ತಾರೆ.

ನಮ್ಮ ಮನೆ ಮತ್ತು ವಾದಿಯ ಮನೆ ಕಾಮನ್ ವಾಲ್ ಗೋಡೆಯನ್ನು ಹೊಂದಿದೆ ಎಂದರೆ ಸರಿ . ಸದರಿ ಎರಡು ಮನೆಗಳ ನೇರವಾಗಿ ಅಂದರೆ ಎದುರುಗಡೆ , ಪೂರ್ವಕ್ಕೆ ನಮ್ಮ ಮತ್ತು ವಾದಿಯ ಕಣಗಳು ಬರುತ್ತವೆ ಎಂದರೆ ಸರಿ. ವಾದಿಯ ಕಣದ ಪೂರ್ವಕ್ಕೆ ಗುತ್ಯಪ್ಪ ಮತ್ತು ಹಂಚೆರ್ ಗಂಗಪ್ಪನವರ ಮನೆಗಳು ಇವೆ ಎಂದರೆ ಸರಿ. ವಾದಿಯ ಕಣದ ದಕ್ಷಿಣಕ್ಕೆ ಃ ಎ ಜಿ ಬಸಪ್ಪ ಮತ್ತು ವೈ ಎಸ್ ಬಸವರಾಜ್ ರವರು ಮನೆಗಳು ಇವೆ ಎಂದರೆ ಸರಿ. ವಾದಿಯ ಕಣದ ಉತ್ತರಕ್ಕೆ ನಮ್ಮ ಮನೆ , ಕಣ ಮತ್ತು ರಸ್ತೆ ಇದೆ ಎಂದರೆ ಸರಿ.

ನಂದ್ಯಪ್ಪ ಮತ್ತು ಚನ್ನಬಸಪ್ಪ ಹಂಚಿಕೆ ಮಾಡಿಕೊಂಡ ನಂತರ ಸದರಿವರ ಮಕ್ಕಳಾದ ಮಹದೇವಪ್ಪ ಮತ್ತು ಬಸವನಗೌಡರವರು ಸದರಿ ರಸ್ತೆಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರು ನಂತರ ವಾದಿ ಬಸಮ್ಮ ಸದರಿ ದಾರಿಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು ಮತ್ತು ವೈ.ಎಸ್. ಬಸವರಾಜ್ ಚೆನ್ನಾಗಿರುವುದಿಲ್ಲ, ನನ್ನ ತಂದೆ ಮತ್ತು ವೈ.ಎಸ್. ಬಸವರಾಜ್ ಚೆನ್ನಾಗಿರುವುದಿಲ್ಲ. ವೈ .ಎಸ್. ಬಸವರಾಜ್‌ರವರು ವಾದಿಯ ಮೇಲೆ ಕೇಸ್ ಹಾಕಿರುವುದು ಗೊತ್ತಿದೆ. ನಾನು ಓ.ಎಸ್. ಬಸವರಾಜ್ ರವರ ಮಾತು ಕೇಳಿ ನಾನು ಮತ್ತು ನನ್ನ ತಂದೆ ಸೇರಿಕೊಂಡು ಬಿ ಷಡ್ಯೂಲ್ ಆಸ್ತಿಯಲ್ಲಿ ಓಡಾಡಲು ದಿಃ18.07.2013

ರಂದು ವಾದಿಗೆ ಅಡ್ಡಿಪಡಿಸಿದ್ದೇವೆ ಎಂದರೆ ಸಾಕ್ಷಿ ವೈ. ಎಸ್. ಬಸವರಾಜ್‌ರವರು ಹೇಳಿಕೊಟ್ಟಿರುವುದಿಲ್ಲ ನಾವೇ ಅಡ್ಡಿ ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮಗೆ ವಾದಿ ಓಡುಡುವ ರಸ್ತೆಗೆ ಅಡ್ಡಿ ಪಡಿಸುವ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ವಾದಿ ಓಡುಡುವ ರಸ್ತೆಗೆ ಅಡ್ಡಿ ಪಡಿಸುವ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,
ಹರಿಹರ